ಸಿವಿಲ್ ಮಿಸ್ ಸಂಖ್ಯೆ. 4/2019 ಆರ್ ಡಬ್ಲ್ಯೂ 1

(ದಿನಾಂಕ 24-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಬಿ ಎಂ ಎ ವಕೀಲರಿಂದಃ-

ನಾನು ಪಿಯುಸಿ ದ್ವಿತೀಯ ವರ್ಷದವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ದಾಖಲಿಸಿದ ದಾವೆ ಸನ್ 2016 ರಲ್ಲಿ ಡಿಕ್ರಿಯಾಗಿದೆ ನಿಖರವಾದ ದಿನಾಂಕ ನನಗೆ ಹೇಳಲು ಬರುವುದಿಲ್ಲ. ಈ ಅರ್ಜಿಯ ಅರ್ಜಿದಾರ ನನಗೆ ಸುಮಾರು 10 ವರ್ಷದಿಂದ ಪರಿಚಯ. ಅವರ ಮೂಲ ವೃತ್ತಿ ಕಬ್ಬು ಕಟಾವು ಮಾಡುವುದು ಆಗಿರುತ್ತದೆ. ಅವರು ಪ್ರತಿ ವರ್ಷ ಕಬ್ಬು ಕಡೆಯಲು ಮೈಸೂರು, ಮಂಡ್ಯ ಮತ್ತು ಚಿಕ್ಕ ಮಂಗಳೂರಿಗೆ ಹೋಗುತ್ತಾರೆ ಎಂದರೆ ಸರಿ. ಆ ಕಾರಣದಿಂದ ಅವರು ಸ್ಥಳೀಯವಾಗಿ ಊರಿನಲ್ಲಿ ಇರುವುದಿಲ್ಲ ಎಂದರೆ ಸರಿ. ಸನ್ 2010 ರಿಂದ 2014 ರವರೆಗೆ ಈ ಭಾಗದಲ್ಲಿ ಬರಗಾಲ ಇತ್ತು ಎಂದರೆ ಸರಿ. ಅರ್ಜಿದಾರನು ಕೊಪ್ಪಳ ತಾಲೂಕು ಕಲಿಕೇರಿ ಗ್ರಾಮದವನು. ನಾನು ಈ ಹಿಂದೆ ಈ ಅರ್ಜಿಗೆ ಸಂಬಂದಿಸಿದ ದಾವೆ ನಂ 104/2014 ಅನ್ನು ಹಣ ವಸೂಲಾತಿಗಾಗಿ ಅರ್ಜಿದಾರನ ವಿರುದ್ದ ದಾಖಲಿಸಿದ್ದೆ. ಅರ್ಜಿದಾರನು ಬೇರೆ ಬೇರೆ ಕಡೆ ದುಡಿಯಲು ಹೋಗಿದ್ದರಿಂದ ಅವನಿಗೆ ನಾನು ದಾಖಲಿಸಿದ ದಾವೆ ಬಗ್ಗೆ ಮಾಹಿತಿ ಇರಲಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರನು ಊರಿನಲ್ಲಿ ಇಲ್ಲದ ಕಾರಣ ಅವನಿಗೆ ದಾವೆಯ ಮಾಹಿತಿ ಇರಲಿಲ್ಲ ಅವನಿಗೆ ದಾವೆಯ ಮಾಹಿತಿ ಇದ್ದಲ್ಲಿ ಅವನು ಸಮಯಕ್ಕೆ ಸರಿಯಾಗಿ ನ್ಯಾಯಾಲಯದಲ್ಲಿ ಪ್ರತಿವಾದ ಪತ್ರವನ್ನು ಸಲ್ಲಿಸುತ್ತಿದ್ದ ಎಂದರೆ ಸರಿಯಲ್ಲ. ದಾವೆ ಡಿಕ್ರಿ ಆದ ನಂತರ ನಾನು ಇದೇ ನ್ಯಾಯಾಲಯದಲ್ಲಿ ದರಕಾಸ್ತು ಪ್ರಕರಣವನ್ನು ದಾಖಲಿಸಿದ್ದೆ ಎಂದರೆ ಸರಿ. ಸದರಿ ಅರ್ಜಿಯಲ್ಲಿ ನೋಟೀಸು ಅರ್ಜಿದಾರನಿಗೆ ತಲುಪಿದ ನಂತರ ದಾವೆ ಡಿಕ್ರಿ ಯಾಗಿರುವ ವಿಚಾರ ಅರ್ಜಿದಾರನಿಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ನಂತರದಲ್ಲಿ ಅರ್ಜಿದಾರರು ಈ ಅರ್ಜಿಯನ್ನು ನ್ಯಾಯಾಲಯಕ್ಕೆ ದಾಖಲಿಸಿದ್ದಾನೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಈ ಹಿಂದಿನ ವಕೀಲರು ಅರ್ಜಿದಾರನಿಗೆ ಸರಿಯಾದ ಮಾಹಿತಿ ನೀಡದೇ ಇರುವುದರಿಂದ ಅರ್ಜಿದಾರನು ಸದರಿ ದಾವೆಯಲ್ಲಿ ತನ್ನ ಪ್ರತಿವಾದ ಪತ್ರವನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಆ ಅರ್ಜಿದಾರನಿಗೆ ವಕೀಲರು ಸದರಿ ದಾವೆಯಲ್ಲಿ ಸರಿಯಾದ ಮಾಹಿತಿ ನೀಡಿಲ್ಲ ಆ ಲಾಭಾವನು ಪಡೆದುಕೊಂಡು ನಾನು ನ್ಯಾಯಾಲಯದಲ್ಲಿ ಡಿಕ್ರಿಯನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾವೆಯಲ್ಲಿ ದಾಖಲೆಯನ್ನು ಸೃಷ್ಟಿಮಾಡಿಕೊಂಡು ನಾನು ದಾವೆ ದಾಖಲಿಸಿದ್ದು ಆ ಕಾರಣಕ್ಕಾಗಿ ಸದರಿ ದಾವೆಯ ತೀರ್ಪು ಮತ್ತು ಡಿಕ್ರಿಯನ್ನು ರಹಿತಿ ಪಡಿಸುವ ಸಲುವಾಗಿ ಈ ಅರ್ಜಿಯನ್ನು

ಅರ್ಜಿದಾರನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಅರ್ಜಿಯ ತಕರಾರಿಗೆ ನನ್ನ ಸಾಕ್ಷಿ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿದ್ದೇನೆ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ